**ಎಂ.ವಿ.ಸಿ ನಂ. 385/2025**
**ಪಿಡಬ್ಲ್ಯೂ -1**

**(ಇಂದು ದಿನಾಂಕಃ 06-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**<u>ಮುಂದುವರಿದ ಮುಖ್ಯ ವಿಚಾರಣೆ ಃ ಅರ್ಜಿದಾರರ ಪರ ಶ್ರೀ ಕೆ.ಡಿ.ಪಿ. ವಕೀಲರಿಂದ:</u>**

1. ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಂತಹ ವಿಷಯಗಳು ಸರಿಯಾಗಿರುತ್ತದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

ವಿಕರಾಬಾದ ಪೋಲೀಸ ಠಾಣೆಯ ಅಪರಾಧ ಸಂಖ್ಯೆ 472/2024 ರಲ್ಲಿನ ಪ್ರ.ವ.ವರದಿಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-1 ಎಂದು ಗುರುತಿಸಲಾಯಿತು.

ದೂರಿನ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-2 ಎಂದು, ಗುರುತಿಸಲಾಯಿತು.

ದೂರನ್ನು ಆಂಗ್ಲ ಭಾಷೆಯಲ್ಲಿ ಭಾಷಾಂತರಿಸಿದ ಪ್ರತಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಪಿ.ಎಮ್. ರೀಪೋರ್ಟನ್ನು ನಿಪಿ-3 ಎಂದು ಗುರುತಿಸಲಾಯಿತು.

ಅಂತಿಮ ವರದಿಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-4 ಎಂದು ಗುರುತಿಸಲಾಯಿತು.

ಮೋಟಾರು ವಾಹನ ಅಪಘಾತ ವರದಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-5 ಎಂದು ಗುರುತಿಸಲಾಯಿತು.

ತೆಲಗು ಭಾಷೆಯಲ್ಲಿರುವ ಪಂಚನಾಮೆಯನ್ನು ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-6 ಎಂದು ಗುರುತಿಸಲಾಯಿತು.

ಆಂಗ್ಲ ಭಾಷೆಯಲ್ಲಿ ಭಾಷಾಂತರಿಸಿ ಪಂಚನಾಮೆಯ ಅನುವಾದದ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-6 (ಎ) ಎಂದು ಗುರುತಿಸಲಾಯಿತು.

ತೆಲಗು ಭಾಷೆಯಲ್ಲಿರುವ ಶವ ಪಂಚನಾಮಾ ವರದಿಯನ್ನು ನಿ.ಪಿ-7 ಎಂದು ಗುರುತಿಸಲಾಯಿತು.

ಆಂಗ್ಲ ಭಾಷೆಯಲ್ಲಿ ಭಾಷಾಂತರಿಸಿ ಶವ ಪಂಚನಾಮೆಯ ಅನುವಾದದ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-7 (ಎ) ಎಂದು ಗುರುತಿಸಲಾಯಿತು.

ಅಪರಾಧ ಸಂಖ್ಯೆ 72/2024 ರಲ್ಲಿನ ದೃಢಿಕೃತ ತೆಲಗು ಭಾಷೆಯಲ್ಲಿರುವ ಸ್ಥಳ ಪಂಚನಾಮೆಯನ್ನು ನಿ.ಪಿ-8 ಎಂದು ಗುರುತಿಸಲಾಯಿತು.

ಅಪರಾಧದ ಸಂಕ್ಷಿಪ್ತ ವರದಿಯ ನಮೂನೆಯನ್ನು ನಿ.ಪಿ-9 ಎಂದು ಗುರುತಿಸಲಾಯಿತು. ಅದರ ಅನುಕ್ರಮ ನಂ.10 ರ ಇಂಗ್ಲಿಷ ಭಾಷೆಯಲ್ಲಿ ಅನುವಾದಿಸಿರುವ ಅನುವಾದವನ್ನು

ನಿ.ಪಿ-10(ಎ) ಎಂದು ಗುರುತಿಸಲಾಯಿತು.

ತೆಲಗು ಭಾಷೆಯಲ್ಲಿರುವ ಕೇಸ್ ಡೈರಿಯ ದೃಢಿಕೃತ ನಕಲನ್ನು ನಿ.ಪಿ-11 ಎಂದು ಗುರುತಿಸಲಾಯಿತು. ಅದನ್ನು ಆಂಗ್ಲ ಭಾಷೆಯಲ್ಲಿ ಭಾಷಾಂತರಿಸಿದ ಅನುವಾದವನ್ನು ನಿ.ಪಿ-11(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರ ಮಾನ್ಯ ಎ.ಟಿ.ಸಿ. ವಕೀಲರಿಂದಃ**

ಎರಡು ಗಾಡಿಗಳು ಅಪಘಾತಕ್ಕಿಡಾಗಿರುತ್ತವೆ ಎಂದರೆ ಒಂದೇ ಗಾಡಿಯಾಗಿರುತ್ತದೆ. ಅಪಘಾತಕೊಳಗಾದ ಎರಡು ಗಾಡಿಗಳ ಮೇಲೆ ಪೋಲೀಸರು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆಂದರೆ ಸರಿಯಲ್ಲ. ಒಂದೇ ಗಾಡಿಯ ಮೇಲೆ ಸಲ್ಲಿಸಿರುತ್ತಾರೆ. ಗಾಡಿಯ ಚಾಲಕನ ಚಾಲನಾ ಪರವಾನಿಗೆ ಇಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ಮೃತನಾದ ವ್ಯಕ್ತಿಯು ನನ್ನ ಗಂಡ ಅಲ್ಲ ಎಂದರೆ ಸರಿಯಲ್ಲ. ಪೊಲೀಸರೊಂದಿಗೆ ಮಿಲಾಪಿಯಾಗಿ ಸುಳ್ಳು ಕೇಸು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನನ್ನ ಗಂಡನ ವಯಸ್ಸು 40 ರಿಂದ 45 ಇತ್ತು ಎಂದರೆ ಸರಿಯಲ್ಲ. 23 ವರ್ಷ ಆಗಿತ್ತು. ನನ್ನ ಗಂಡ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಎಲೆಕ್ಟ್ರಿಷಿಯನ್ ಕೆಲಸ ಮಾಡುತ್ತಿದ್ದ. ನನ್ನ ಗಂಡ ನಿರೋದ್ಯೋಗಿ ಆಗಿದ್ದರಿಂದ ವಿಮಾ ಕಂಪನಿಯಿಂದ ಯಾವುದೇ ಪರಿಹಾರವನ್ನು ಪಡೆಯಲು ನಾನು ಅರ್ಹಳಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಎಲೆಕ್ಟ್ರಿಷಿಯನ್ ಕೆಲಸ ಮಾಡುತ್ತಿದ್ದ ಬಗ್ಗೆ ದಾಖಲಾತಿಯನ್ನು ಸಲ್ಲಿಸಿಲ್ಲ ಎಂದರೆ ಸರಿ. ನನ್ನ ಗಂಡ 35 ಸಾವಿರ ರೂಪಾಯಿ ತಿಂಗಳ ವರಮಾನ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಂಗತಿಗಳನ್ನು ನಮೂದಿಸಿ ಸುಳ್ಳು ಪರಿಹಾರ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಮುಖ್ಯ ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.